Govt. of Karnataka [C.R.P. 67

Deposition Sheets (R.P. No.

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ**

**ಪ್ರಕರಣ ಸಂಖ್ಯೆ: 1362/2025**

**ದಿನಾಂಕ: 06-05-2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| | | | |
|---|---|---|---|
| ಸಿಡಬ್ಲ್ಯೂ: | 2 | ಪಿಡಬ್ಲ್ಯೂ | 4 |
| ಹೆಸರು | ನಾಗರಾಜು | | |
| ತಂದೆ / ಗಂಡನ ಹೆಸರು | ತಿಪ್ಪೇನಿಂಗಣ್ಣ | | |
| ವಯಸ್ಸು | 39 | | |
| ಉದ್ಯೋಗ | ಚಾಲಕ | | |
| ವಾಸ | ಗುಮ್ಮನಹಳ್ಳಿ ಗೊಲ್ಲರಹಟ್ಟಿ | | |

**ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ:**

ನನ್ನ ತಮ್ಮನಿಗೆ ಆರೋಗ್ಯ ಸರಿಯಿಲ್ಲದ ಕಾರಣ ಶಿರಾದ ಸರ್ಕಾರಿ ಆಸ್ಪತ್ರೆಗೆ ದಿ: 10-10-2025 ರಂದು ಸುಮಾರು ಮದ್ಯಾಹ್ನ 12.30 ಕ್ಕೆ ನನ್ನ ಬಾಬ್ತು ವಾಹನ ಸಂಖ್ಯೆ ಕೆಎ-06-ಇಬಿ-4556 ಸ್ಪೆಂಡರ್ ಪ್ಲಸ್ ಬೈಕ್ ನಲ್ಲಿ ಕರೆದುಕೊಂಡು ಬಂದು ವಾಹನವನ್ನು ಆಸ್ಪತ್ರೆಯ ಆವರಣದಲ್ಲಿ ನಿಲ್ಲಿಸಿ , ಆಸ್ಪತ್ರೆಗೆ ಚಿಕಿತ್ಸೆ ಕೊಡಿಸಲು ಒಳಗೆ ಹೋಗಿದ್ದು, ನನ್ನ ದೊಡ್ಡಪ್ಪನ ಮಗ ನರಸಿಂಹಮೂರ್ತಿ ಅಲ್ಲಿಗೆ ಬಂದಿದ್ದು , ಚಿಕಿತ್ಸೆ ಕೊಡಿಸಲು ಸ್ವಲ್ಪ ತಡವಾದ ಕಾರಣ ನಾನು ಹೊರಗೆ ಬಂದು ನೋಡಿದಾಗ ಬೈಕ್ ಸ್ಥಳದಲ್ಲಿ ಇರಲಿಲ್ಲ. ನಾನು ಆಸ್ಪತ್ರೆಯಲ್ಲಿ ಎಲ್ಲಾ ಕಡೆ ಹುಡುಕಾಡಿದೆ ನನ್ನ ಬೈಕ್ ಸಿಕ್ಕಿರುವುದಿಲ್ಲ. ನಂತರ ನಾನು ನನ್ನ ತಮ್ಮನನ್ನು ಕರೆದುಕೊಂಡು ಆಟೋದಲ್ಲಿ ಮನೆಗೆ ಹೋಗಿರುತ್ತೇನೆ.

ನಂತರ ಮರುದಿನ ಕಳುವಾದ ವಾಹನಗಳು ಸಿಕ್ಕಿದೆ ಎಂದು ಶಿರಾ ನಗರ ಪೋಲಿಸರು ನನ್ನ ಸಂಬಂಧಿಕರಿಗೆ ತಿಳಿಸಿದ್ದು, ಅವರಿಂದ ನನಗೆ ಮಾಹಿತಿ ತಿಳಿದಿರುತ್ತದೆ. ನಾನು ಪೋಲಿಸ್ ಠಾಣೆಗೆ ಹೋಗಿ ವಾಹನ ನೋಡಿದಾಗ ಸದರಿ ವಾಹನ ನನ್ನದು ಎಂದು ಗುರುತಿಸಿರುತ್ತೇನೆ. ಸದರಿ ವಾಹನ ರಿಲೆಯನ್ಸ್ ಪೆಟ್ರೋಲ್ ಬಂಕ್ ಬಳಿ ಡ್ರಂಕ್ ಅಂಡ್ ಡ್ರೈವ್ ಚೆಕ್ ಮಾಡುತ್ತಿರುವಾಗ ಸದರಿ

ವಾಹನ ಚಾಲಕನನ್ನು ಹಿಡಿದು ಕೇಳಿದಾಗ ದಾಖಲೆಗಳನ್ನು ನೀಡದೆ ಸದರಿ ಬೈಕ್ ನ್ನು ಶಿರಾದ ಸರ್ಕಾರಿ ಆಸ್ಪತ್ರೆಯ ಆವರಣದಿಂದ ಶಶಿಕುಮಾರ್ ಕಳುವು ಮಾಡಿರುತ್ತಾನೆ ಎಂದು ಪೋಲಿಸರು ನನಗೆ ತಿಳಿಸಿರುತ್ತಾರೆ. ಆರೋಪಿಯನ್ನು ವಿಡಿಯೋ ಕಾನ್ ಫಿರೆನ್ಸಿಂಗ್ ಮೂಲಕ ಹಾಜರುಪಡಿಸಿದ್ದು , ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ದಿಃ 10-11-2025 ರಂದು ನಾನು ಪೋಲಿಸ್ ಠಾಣೆಯಲ್ಲಿ ವಾಹನದ ಎಲ್ಲಾ ದಾಖಲೆಗಳನ್ನು ಒದಗಿಸಿ , ಇಂಡಿಮ್ನಿಟಿ ಬಾಂಡ್ ಬರೆದುಕೊಟ್ಟು ನನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ . ಇಂಡಿಮ್ನಿಟಿ ಬಾಂಡ್ ನ್ನು **ನಿಪಿ-8** ಎಂದು , ಸಾಕ್ಷಿಯ ಸಹಿಯನ್ನು **ನಿಪಿ-8(ಎ)** ಎಂದು ಗುರುತಿಸಲಾಯಿತು. ವಾಹನ ಬಿಡುಗಡೆ ಮಾಡುವ ಸಮಯದಲ್ಲಿ ಪೋಲಿಸರು ಬಾವಚಿತ್ರಗಳನ್ನು ತೆಗೆದಿರುತ್ತಾರೆ. ಈಗ ನೋಡುತ್ತಿರುವ ಬಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಸದರಿ ಬಾವಚಿತ್ರಗಳನ್ನು **ನಿಪಿ-9 ರಿಂದ ನಿಪಿ-12** ಎಂದು ಗುರುತಿಸಲಾಯಿತು. ಈ ಸಂಬಂಧವಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ**

ದಿಃ 10-10-2025 ರಂದು ನಾನು ನನ್ನ ತಮ್ಮನನ್ನು ಶಿರಾದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಎಂದು ಹೇಳಿದ್ದು , ಆ ಬಗ್ಗೆ ದಾಖಲೆ ಮನೆಯಲ್ಲಿದೆ. ಸದರಿ ದಾಖಲೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ನನ್ನ ತಮ್ಮನನ್ನು ಆ ದಿನ ಆಟೋದಲ್ಲಿ ಕರೆದುಕೊಂಡು ಹೋಗಿದ್ದೆ ಎಂದು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಬೈಕ್ ಕಳುವು ಆದ ದಿನವೇ ದೂರು ದಾಖಲಿಸಲು ತೊಂದರೆ ಇರಲಿಲ್ಲ ಎಂದರ ಸಾಕ್ಷಿಯು ನನ್ನ ತಮ್ಮನಿಗೆ ಆರೋಗ್ಯ ಸರಿಯಿಲ್ಲದ ಕಾರಣ ಮನೆಗೆ ಕರೆದುಕೊಂಡು ಹೋಗಿದ್ದೆ ಎಂದು ನುಡಿಯುತ್ತಾರೆ. ಆರೋಪಿಯನ್ನು ಪೋಲಿಸರು ತೋರಿಸಿದ ಕಾರಣ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿ ಯಾವುದೇ ಬೈಕ್ ಕಳುವು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಸಲುವಾಗಿ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.